ದೇವೇಂದ್ರ ಬಂದಿದ್ದನ್ನು ನೋಡಿ ಸಮಾಧಾನವಾಯಿತು. ವಿಭಾ ತುಂಬ ಸುಸ್ತಾದವಳಂತೆ ಕಾಣುತ್ತಿದ್ದಳು. ನನ್ನನ್ನು ನೋಡಿದೊಡನೇ ಸಂತೋಷದಿಂದ ಅವಳ ಮುಖ ಅರಳಿತು.

'ಅಬ್ಬ, ಏನು ಸರ್‌ಪ್ರೈಜ್ ಅಕ್ಕ!'

'ಹೂಂ, ಸರ್‌ಪ್ರೈಜ್ ಎಂದೇ ತಿಳಿ. ನೀನಂತೂ ಕರೆಯಲಿಲ್ಲ, ನಾನೇ ಆಮಂತ್ರಣ ತೆಗೆದುಕೊಂಡು ಬಂದುಬಿಟ್ಟೆ.'

'ಏನು ಮಾತೂಂತ ಆಡುತ್ತೀರಕ್ಕ. ವಿಭಾಳನ್ನೇ ಕೇಳಿ, ಅಕ್ಕ ಬಂದಿದ್ದಾರಂತೆ ಅವರನ್ನು ಒಂದು ದಿನ ಊಟಕ್ಕೆ ಕರೆಯೋಣವೆಂದು ನಾನು ಎಷ್ಟು ಸಾರೆ ಹೇಳಿದೆ' ಎಂದ ವಿಭಾನ ಗಂಡ ದೇವೇಂದ್ರ. ಮನಸ್ಸಿನಲ್ಲೇ ಎಷ್ಟು ಸುಳ್ಳು ಹೇಳುತ್ತಾನೆ. ನಾನಿನ್ನೂ ಇಲ್ಲಿಯೇ ಇರುವೆನೆಂದು ಇವನಿಗೆ ಗೊತ್ತೇ ಇರಲಿಕ್ಕಿಲ್ಲ ಎಂದುಕೊಂಡೆ. ಸೌಜನ್ಯಕ್ಕಾಗಿ, 'ನೋಡಿ, ನಿಮ್ಮ ಮನಸ್ಸಿನಲ್ಲಿದ್ದದ್ದು ನನಗೆ ಗೊತ್ತಾಗಿ ಹೋಯಿತು. ಅದಕ್ಕೆಂದೇ ನಾನೇ ಬಂದೆ' ಎಂದೆ.

'ನೀವು ಬಂದದ್ದು ತುಂಬ ಸಂತೋಷವಾಯಿತಕ್ಕ' ಎಂದ ವಿಭಾ ಏನೋ ಯೋಚನೆಯಲ್ಲಿದ್ದಂತೆ ಕಂಡಳು. ಅವಳು ಕಣ್ಣುಸನ್ನೆ ಮಾಡಿ ದೇವೇಂದ್ರನನ್ನು ಒಳಗೆ ಕರೆದು ಮೆಲ್ಲಗೆ ಏನೋ ಹೇಳಿದಳು. ಅವನು ಸ್ಕೂಟರ್ ತೆಗೆದುಕೊಂಡು ಹೊರಟು ಹೋದ. 'ಬಂದ ತಕ್ಷಣ ಅವರನ್ನು ಮತ್ತೆಲ್ಲಿಗೆ ಕಳಿಸಿದೆ ವಿಭಾ. ನನಗೆ ಫಾರ್ಮಾಲಿಟಿ ಬೇಡ, ನಾನು ಸುಮ್ಮನೆ ನಿಮ್ಮನ್ನು ನೋಡಿಕೊಂಡು ಹೋಗಲೆಂದು ಬಂದಿದ್ದೇನೆ.'

'ಫಾರ್ಮಾಲಿಟಿ ಎಂಥದಕ್ಕ, ಸ್ವಲ್ಪ ತರಕಾರಿ ತರಲು ಹೇಳಿದ್ದೇನಷ್ಟೇ' ಅವಳು ಚಹಾಕ್ಕಾಗಿ ಗ್ಯಾಸ್ ಮೇಲೆ ನೀರಿಡುತ್ತ, 'ದಿನಾಲೂ ಬರುವಾಗಲೇ ತಂದು ಬಿಡುತ್ತೇವೆ. ಇವತ್ತ್ಯಾಕೋ ಹಾಗೇ ಬಂದು ಬಿಟ್ಟೆವು' ಎಂದಳು. ನಾನು ಅವಳ ಬಾಡಿದ ಮುಖದ ಕಡೆಗೆ ನೋಡುತ್ತ ಕೇಳಿದೆ: 'ನಿನ್ನ ಆರೋಗ್ಯ ಸರಿ ಇಲ್ಲವೇ? ತುಂಬ ಸುಸ್ತಾದವಳಂತೆ ಕಾಣುತ್ತಿದ್ದೀ?'

'ಹೌದಕ್ಕ, ಎಂಟು ದಿನಗಳ ಹಿಂದಷ್ಟೇ ಡಿ.ಎನ್.ಸಿ. ಮಾಡಿಸಿಕೊಂಡೆ. ಅದರಿಂದ ಸ್ವಲ್ಪ ಸುಸ್ತೆನಿಸುತ್ತಿದೆ'.

'ಡಿ.ಎನ್.ಸಿ. ಯಾಕೆ? ಪ್ರಸಾದನಿಗಾಗಲೇ ಆರು ವರ್ಷವಲ್ಲವೇ?'

'ಹೌದಕ್ಕ, ಈಗ ಸ್ವಲ್ಪ ಫ್ರೀಯಾಗಿದ್ದೇನೆ. ಮತ್ತೆ ಅದೆಲ್ಲ ಜಂಜಾಟ ಬೇಡವೆನಿಸಿತು. ಮನೆಯಲ್ಲಿ ನೋಡಿಕೊಳ್ಳುವವರಾರು? ನೌಕರಿಯನ್ನೂ ಬಿಡುವಂತಿಲ್ಲ.'

'ಯಾಕೆ ನಿನ್ನ ಅತ್ತೆ ಇರುವರಲ್ಲ.' ಅವಳು ಏನೂ ಹೇಳದೇ ಚಹದ ಕಪ್ಪನ್ನು ನನಗೆ ಕೊಟ್ಟು ಇನ್ನೊಂದನ್ನು ತೆಗೆದುಕೊಂಡು ಅತ್ತೆಗೆ ಕೊಡಲು ಹೊರಗೆ ಹೋದಳು. ಆಗ ನನ್ನ ಗಮನಕ್ಕೆ ಬಂತು – ನಾನು ಬಂದು ಅರ್ಧಗಂಟೆಯಾದರೂ ಅವಳತ್ತೆ ಚಹ ಬೇಡ ನೀರನ್ನೂ ಕೇಳಿರಲಿಲ್ಲ. ವಿಭಾ ನನ್ನ ಮಾತಿಗೆ ಏನೂ ಉತ್ತರ ಕೊಡದಿರುವುದನ್ನು ನೋಡಿ ಅವಳಿಗೆ ಅತ್ತೆಯ ಬಗ್ಗೆ ಏನು ಹೇಳಲೂ ಇಷ್ಟವಿಲ್ಲವೆಂದು ಗೊತ್ತಾಯಿತು. ಅಷ್ಟರಲ್ಲಿ ದೇವೇಂದ್ರ ಬಂದ. ತರಕಾರಿಯ ಜೊತೆಗೆ ಮೊಸರು, ತುಪ್ಪ, ಹಪ್ಪಳ, ರಸಗುಲ್ಲಾ ಕೂಡ ತಂದಿದ್ದ. ನಾನು ಬಟಾಣಿ ಸುಲಿಯುತ್ತಾ ವಿಭಾ ಹಿಟ್ಟು ಕಲೆಸುತ್ತಿರುವುದನ್ನು ನೋಡಿ – 'ವಿಭಾ, ಎಷ್ಟು ಹಿಟ್ಟು ಕಲೆಸುತ್ತಿರುವೆಯೇ? ನಿನ್ನಕ್ಕನೇನು ರಾಕ್ಷಸಿ ಎಂದು ತಿಳಿದೆಯಾ?' ಎಂದೆ.

'ಎರಡು ಮೂರು ಸಾರೆ ಮಾಡುವಷ್ಟನ್ನು ಒಂದೇ ಸಾರಿ ಕಲೆಸಿಡುತ್ತೇನಕ್ಕ. ಬೆಳಿಗ್ಗೆ ತುಂಬ ಗಡಿಬಿಡಿಯಾಗುತ್ತದೆ. ಸಂಜೆ ಬಂದಾಗ ತುಂಬ ಸುಸ್ತಾಗಿರುತ್ತದೆ. ಏನೂ ಮಾಡಲೂ ಮನಸ್ಸಾಗುವುದಿಲ್ಲ, ಖಿಚಡಿ ತಿಂದು ಮಲಗಿಬಿಡೋಣ ಎನಿಸುತ್ತದೆ. ಆದರೆ ಎಲ್ಲರಿಗಾಗಿ